# 1

ಶರ್ಲೀ ವರ್ಕಿ ನನ್ನ ಕಾಲೇಜುದಿನಗಳಲ್ಲಿನ ಸಹಪಾಠಿ. ಕೇರಳದ ಕಡೆಯ ಕ್ರಿಶ್ಚಿಯನ್ನು. ಸನ್ನೀ ವರ್ಕಿ ಎಂದೊಬ್ಬ ದುಬಾಈ ಮೂಲದ ಬ್ಯುಸಿನೆಸ್ಸ್ ಟೈಕೂನ್ ಇದ್ದಾನೆ – ಬೇಕಿದ್ದರೆ ಗೂಗಲಿಸಿ ನೋಡಿ... ಆತನಿಗೆ ಕಸಿನ್ನು. ವಿರಾಟ್ ಜಕ್ಕರಿಯಾ ಎಂದೊಬ್ಬ ಮಲಯಾಳಿ ಕ್ರಿಶ್ಚಿಯನ್ನನ್ನು ಮದುವೆಯಾಗಿದ್ದಾಳೆ. ಇವಳು ಆರ್ಕಿಟೆಕ್ಟು. ಅವನು ಸಿವಿಲ್ ಎಂಜಿನಿಯರು. ಇಬ್ಬರೂ ಸೇರಿಕೊಂಡು – ತಂತಮ್ಮ ಬಿಡಿಬಿಡಿ ಸರ್ನೇಮುಗಳನ್ನು ಸಂಕರಿಸಿ ತೆಗೆದ 'ವರ್ಕರಿಯಾ' ಎಂಬ ಹೆಸರಿನಲ್ಲಿ ಇಂಟೀರಿಯರ್ ಡಿಸೈನಿನ ಕಾಂಟ್ರ್ಯಾಕ್ಟಿಕೆ ನಡೆಸುತ್ತಾರೆ. ಸದರಿ ಕಂಪನಿಗೆ ಸಾಕಷ್ಟು ವರ್ಚಸ್ಸಿದೆ. ಹಣಕಾಸು ಚೆನ್ನಾಗಿದೆ.

ತೊಂಬತ್ತಾರನೇ ಇಸವಿಯಲ್ಲಿ, ಬಿಎಮ್ಮೆಸ್ ಕಾಲೇಜಿನ ಆರ್ಕಿಟೆಕ್ಚರ್ ಡಿಪಾರ್ಟ್‌ಮೆಂಟಿನಲ್ಲಿ ದಾಖಲುಗೊಂಡ – ನಾವು, ಅಂದರೆ ಹದಿಮೂರು ಹುಡುಗರೂ ಇಪ್ಪತ್ತಾರು ಹುಡುಗಿಯರೂ ಇರುವ, ಒಟ್ಟು ಮೂವತ್ತೊಂಬತ್ತು ಸದಸ್ಯರ – ಒಂದು 'ವಾಟ್ಸ್‌ಆ್ಯಪ್ ಗ್ರುಪ್' ನಮ್ಮ ನಮ್ಮ ಮೊಬೈಲುಗಳ ಮುಖೇನ, ಇವೊತ್ತು, ಬಲು ಸುಸಂಪನ್ನವಾಗಿ ಚಾಲ್ತಿಯಲ್ಲಿದೆಯಾದರೆ – ಅದರ ಸಂಪೂರ್ಣ ಹೊಣೆಗಾರಿಕೆ, ಈ ಶರ್ಲೀ ವರ್ಕಿಯದ್ದೇ ಅನ್ನಬೇಕು. ಈ ಗುಂಪಿನೊಳಗಿನ ಆಗುಹೋಗುಗಳ ಕೀರ್ತಿಯಾದರೂ ಇವಳಿಗೇ ಸಲ್ಲಬೇಕು! ಸದರಿ ಗುಂಪಿಗೆ – 'ಡರ್ಟೀ ಥರ್ಟೀನೈನ್' ಎಂಬ ಹೆಸರು ಕೊಟ್ಟಿದ್ದಾಳೆ. ಅಂದರೆ ಮೂವತ್ತೊಂಬತ್ತು ಕೊಳಕರು ಅನ್ನುವ ಅರ್ಥ! ನಿಯಮಿತವಾಗಿ, ಬರೇ ಅಗ್ಗದ ಜೋಕುಗಳಷ್ಟೇ ಅಲ್ಲದೆ – ಘನಗಂಭೀರವಾದ ಟೆಕ್ನಿಕಲ್ ಸಂಗತಿಗಳನ್ನೂ, ಶರ್ಲೀ ಈ ಗುಂಪಿನಲ್ಲಿ ಹಂಚಿ ಹರಿಬಿಡುತ್ತಾಳೆ. ಇಡೀ ತರಗತಿಯಲ್ಲಿ ಅತ್ಯಂತ ಕಡಿಮೆ ವಾಚಾಳಿಯಾದ ನನ್ನನ್ನೂ ಒಳಗೊಂಡು, ಎಲ್ಲರನ್ನೂ ಈ ಪರಿಯ ತಾಂತ್ರಿಕ ಚರ್ಚೆಗಳಲ್ಲಿ ತೊಡಗಿಸುತ್ತಾಳೆ. ಕೆಲವೊಮ್ಮೆ ಗೊತ್ತುವಳಿಗಳನ್ನು ಕೈಕೊಂಡು, ಸಂಗತಿಯನ್ನು ಸರ್ಕಾರದವರೆಗೂ ಕೊಂಡೊಯ್ದು – ಕಟ್ಟಡಗಾರಿಕೆಯಲ್ಲಿನ ಸಂಕಷ್ಟಗಳ ಕುರಿತು ದನಿಯೆತ್ತುತ್ತಾಳೆ. ಅಷ್ಟಿಷ್ಟು ಪರಿಹಾರಗಳನ್ನೂ ಈಡೇರಿಸಿದ್ದಾಳೆ.

ಇರಲಿ... ವಾಟ್ಸ್‌ಆ್ಯಪ್ 'ಮೆಸೇಜಿಂಗ್' ಎಂದೊಂದು – ಈಗಿತ್ತಲಾಗಿ ಸುರುಗೊಳ್ಳುವುದಕ್ಕೂ ಎಷ್ಟೋ ಮೊದಲು, ಶರ್ಲೀ ವರ್ಕಿ – ನಮ್ಮೆಲ್ಲರನ್ನೂ ಇ–ಮೇಲುಗಳ ಮೂಲಕ ಕಲೆಹಾಕಿದ್ದನ್ನೂ ಇಲ್ಲಿ ನೆನೆಯಬೇಕು! ಕಾಲೇಜಿನಲ್ಲಿನ ನಮ್ಮ ಐದು ವರ್ಷಗಳ ವಿದ್ಯಾಭ್ಯಾಸದುದ್ದಕ್ಕೂ – ಇವಳೇ ನಮ್ಮ ತರಗತಿಯ ಪ್ರತಿನಿಧಿಯಾಗಿದ್ದಳೆಂಬುದೂ ಅಷ್ಟೇ ಮುಖ್ಯವಾದ ಸಂಗತಿ! ಕಾಲೇಜಿನಾಚೆಗಿನ ಈ ಇಪ್ಪತ್ತೂ ಚಿಲ್ಲರೆ ವರ್ಷಗಳಲ್ಲಿಯೂ ನಮ್ಮೆಲ್ಲರನ್ನೂ ಒಡಬೆರೆಸಿರುವ ಏಕೈಕ ದನಿಯಾಗಿದ್ದಾಳೆಂಬುದೂ ಸತ್ಯವೇನೇ!

ಶರ್ಲೀ ವರ್ಕಿ, ಒಂದರ್ಥದಲ್ಲಿ ಗಂಡೆದೆಯ ಹೆಣ್ಣು. ದಿಟ್ಟೆ. ಈ ಜಗತ್ತಿನಲ್ಲಿನ ಯಾವ ಗಂಡಸಿನ ಸಮಕ್ಕೂ ಏಗಬಲ್ಲ ಸ್ತ್ರೀ! ಇಲ್ಲದಿದ್ದಲ್ಲಿ, ಬರೇ ಗಂಡಸರೇ ಇರುವ ಕಂಟ್ರಾಕ್ಟುದಾರಿಕೆಯನ್ನು ತಾನೊಬ್ಬಳೇ ಹೆಂಗಸು ಏಕಾಏಕಿ ಮಾಡಬಲ್ಲಳೆಂದರೆ ನಂಬಲಾದೀತೆ? ವಿರಾಟ್ ಜಕ್ಕರಿಯಾನನ್ನು ವರಿಸಲಿಕ್ಕೂ ಎಷ್ಟೋ ಮೊದಲು, 'ವರ್ಕೀ ಕಂಟ್ರ್ಯಾಕ್ಟ್ಸ್' ಎಂಬ ಹೆಸರಿನಲ್ಲೊಂದು ಕಂಪನಿ ನಡೆಸಿ ಗೆದ್ದಿರುವುದೂ ಇದೆ!

ಇನ್ನುಳಿದಂತೆ, ಈ ಶರ್ಲೀ ವರ್ಕಿ, ನನ್ನೊಡನೆ ನೇರ ಸಂಪರ್ಕವಿಟ್ಟುಕೊಂಡಿರುವುದು ಕಡಿಮೆಯೇ. ಅಥವಾ, ನಾನೇ ಉಳಿದೆಲ್ಲರೊಡನೆ ಯಾವುದೇ ಬಗೆಯ ಸಂವಹನ ಇಟ್ಟುಕೊಂಡಿರುವುದೂ ಅಷ್ಟಕ್ಕಷ್ಟೆಯೇ. ನನ್ನ ಬಗ್ಗೆ ನಾನೇ ಆಡಿಕೊಂಡೇನಾದರೆ, ಸಿಕ್ಕಾಪಟ್ಟೆ ಕಡಿಮೆ ಮಾತಿನ ಜನ ನಾನು! ಎಷ್ಟು ಬೇಕೋ ಅಷ್ಟೇ ಅನ್ನುವಷ್ಟು, ಇಷ್ಟೇ ಇಷ್ಟೂ ಸಾಕೆನ್ನುವಷ್ಟು, ಇಷ್ಟೆಂಬ ಬಿಡಿಯನ್ನೇ ಅಷ್ಟೆಲ್ಲ ಇಡಿಯೆನ್ನುವ ಹಾಗೆ – ಬಗೆದು ಆಡುವ ಮನುಷ್ಯ ನಾನು! ಘನಘೋರ ಹಾಸ್ಯ – ಪರಿಹಾಸ್ಯದ